ಮುಲ್ಲಾಮಾರಿ ಮೇಲ್ದಂಡೆ	ರೂ. 8.21 ಕೋಟಿಗಳು
ಚಂದ್ರಂಪಳ್ಳಿ	ರೂ. 14.93 ಕೋಟಿಗಳು
ಭೀಮಸಮುದ್ರ ಕೆರೆ ನಾಲೆಗಳ ಹಾಗೂ ಪೂರಕ ನಾಲೆಗಳು	ರೂ. 9.375 ಕೋಟಿಗಳು

ಇ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯ ಬಾಕಿ ಕಾಮಗಾರಿಗಳು ಹಾಗೂ ಮುಲ್ಲಾಮಾರಿ ಮೇಲ್ದಂಡೆ ಯೋಜನೆಯ ಅಣೆಕಟ್ಟು ಮತ್ತು ನಾಲೆಗಳ ಆಧುನೀಕರಣ ಕಾಮಗಾರಿಗಳನ್ನು ಕೇಂದ್ರ ಸರ್ಕಾರದ ಎ.ಐ.ಬಿ.ಪಿ. ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಕೆರೆಗಳ ಸಮಗ್ರ ಅಭಿವೃದ್ಧಿ

309 (727) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹದಿಮೂರನೇ ಆರ್ಥಿಕ ಆಯೋಗದ ಅನುದಾನದಡಿಯಲ್ಲಿ ರಾಜ್ಯದಲ್ಲಿ ಜಲಕಾಯಗಳ/ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಗ್ರ್ಯಾಂಟ್ ಇನ್ ಏಡ್ ಅಡಿ ಎಷ್ಟು ಕೋಟಿ ಅನುದಾನವನ್ನು ನೀಡಲಾಗುತ್ತಿದೆ; ಈ ಯೋಜನೆಯ ಅನುಷ್ಠಾನಕ್ಕಾಗಿ ಅಂದಾಜು ವೆಚ್ಚ ಯೋಜನೆಯನ್ನು ತಯಾರಿಸಲಾಗಿದೆಯೇ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಈ ಯೋಜನೆಯಡಿಯಲ್ಲಿ ರಾಜ್ಯದ ಯಾವ ಯಾವ ಪ್ರದೇಶಗಳಲ್ಲಿ ಈ ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಳ್ಳಲಾಗುತ್ತಿದೆ;

ಇ) ಈ ಯೋಜನೆಯಡಿಯಲ್ಲಿ ಅತ್ಯಂತ ಹಿಂದುಳಿದ ಬೀದರ್ ಜಿಲ್ಲೆಯ ಯಾವ ಯಾವ ವಿಧಾನಸಭಾ ಕ್ಷೇತ್ರಗಳಲ್ಲಿ ಜಲಕಾಯಗಳನ್ನು ಮತ್ತು ಸಣ್ಣ ನೀರಾವರಿ ಕೆರೆಗಳನ್ನು ಅಭಿವೃದ್ಧಿಪಡಿಸಲಾಗುವುದು; ಈ ಯೋಜನೆಗಾಗಿ ತಗಲುವ ಅಂದಾಜು ವೆಚ್ಚ ಎಷ್ಟು;

ಈ) ಈ ಯೋಜನೆಯನ್ನು ಎಷ್ಟು ಅವಧಿಯೊಳಗೆ ಅನುಷ್ಠಾನಗೊಳಿಸಲಾಗುವುದು ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) 2011–12ನೇ ಸಾಲಿನಿಂದ 2014–15ನೇ ಸಾಲುಗಳಲ್ಲಿ ಕೆರೆಗಳ ಅಭಿವೃದ್ಧಿಗಾಗಿ ಹದಿಮೂರನೆ ಅರ್ಥಿಕ ಆಯೋಗವು ರೂ. 350.00 ಕೋಟಿಗಳನ್ನು ರಾಜ್ಯಕ್ಕೆ ನಿಗದಿಪಡಿಸಿದೆ. ಇಲಾಖೆಯು ತಯಾರಿಸಿರುವ ಕ್ರಿಯಾ ಯೋಜನೆಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪ್ರಮುಖವಾಗಿ ಬರಪೀಡಿತ ಅಭಿವೃದ್ಧಿ ಪ್ರದೇಶಾಭಿವೃದ್ಧಿ ಯೋಜನೆಯಡಿ (ಡಿ.ಪಿ.ಎ.ಪಿ) ಗುರುತಿಸಲಾಗಿರುವ ತಾಲ್ಲೂಕುಗಳನ್ನು ಹೊರತುಪಡಿಸಿ ಉಳಿದ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿದೆ.

ಇ) ಬೀದರ್ ನಗರ ಮತ ಕ್ಷೇತ್ರದಲ್ಲಿ 4 ಕೆರೆಗಳನ್ನು ಮತ್ತು ಬೀದರ ದಕ್ಷಿಣ ಮತಕ್ಷೇತ್ರದಲ್ಲಿ 2 ಕೆರೆಗಳನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ. ಸುಮಾರು ರೂ. 3.50 ಕೋಟಿ ತಗಲಬಹುದಾಗಿದೆ.

ಈ) 2011–12ನೇ ಸಾಲಿನಿಂದ 2014–15ನೇ ಸಾಲುಗಳಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ, ವಿಧಾನ ಸಭಾ ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 727ಕ್ಕೆ ಅನುಬಂಧ

Districtwise Abstract Minor Irrigation Works Proposed under 13th Finance Commission Grants

Sl. No.	District	Total number of works	Atchkat in Ha. (CCA)	Total Estimated cost (Rs. in lakhs)
1	2	3	4	5
1	Belgaum	23	2,986.80	588.00
2	Dharwad	4	204.00	205.00
3	Gadag	4	419.00	395.00
4	Haveri	22	2,319.60	1,440.00

1	2	3	4	5
5	Uttara Kannada	63	12,527.53	2,779.00
6	Bijapur	48	12,141.00	3,963.00
7	Bagalkot	5	3,038.00	794.00
8	Gulbarga	10	4,659.00	810.00
9	Yadgir			
10	Bidar	6	1,522.00	350.00
11	Raichur	16	1,645.00	598.60
12	Koppal	36	9,702.00	2,390.80
13	Bellary	29	5,482.00	2,789.91
14	Bangalore Urban	19	1,967.53	1,575.75
15	Bangalore Rural	2	351.70	575.00
16	Ramanagara	3	40.00	108.00
17	Tumkur	1	42.80	350.00
18	Chickaballapur	16	3,262.00	2,166.94
19	Chitradurga	7	614.13	400.00
20	Davanagere	19	3,114.38	1,144.00
21	Shimoga	107	6,302.27	2,717.50
22	Chikkamagalur	16	928.57	484.00
23	Mandya	54	4,535.97	2,577.00
24	Chamarajanagar	34	9.145.30	2,020.00
25	Mysore	25	3,602.62	1,493.50

1	2	3	4	5
26	Hassan	4	246.55	945.00
27	Dakshina Kannada	2	533.48	100.00
28	Udupi	5	392.97	270.00
29	Kodagu	44	2,099.50	970.00
	GRAND TOTAL	**624**	**93,825.70**	**35,000.00**

ಕೌಶಲ್ಯ ತರಬೇತಿ

310 (729) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ: ನಂಜುಂಡಪ್ಪ ವರದಿಯ ಶಿಫಾರಸ್ಸಿನನ್ವಯ ಅತೀ ಹಿಂದುಳಿದ ಪ್ರದೇಶಗಳಲ್ಲಿ ಕೌಶಲ್ಯ ಸಿರಿ ಕೇಂದ್ರಗಳ ಮೂಲಕ ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಎಷ್ಟು ಜನ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಲಾಗಿದೆ; ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಬೀದರ್ ಜಿಲ್ಲೆಯ ವಿವಿಧ ಮತ ಕ್ಷೇತ್ರಗಳ ಎಷ್ಟು ಜನ ಅಭ್ಯರ್ಥಿಗಳು ಯಾವ ಯಾವ ವೃತ್ತಿಗಳಲ್ಲಿ ತರಬೇತಿ ಪಡೆಯುವ ಮೂಲಕ ಈ ಯೋಜನೆಯ ಲಾಭವನ್ನು ಪಡೆದುಕೊಂಡಿದ್ದಾರೆ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):

ಅ) ಅತೀ ಹಿಂದುಳಿದ ಪ್ರದೇಶಗಳ 20539 ಅಭ್ಯರ್ಥಿಗಳಿಗೆ ಕೌಶಲ್ಯ ಸಿರಿ ಕೇಂದ್ರಗಳ ಮೂಲಕ ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಕೌಶಲ್ಯ ತರಬೇತಿ ನೀಡಲಾಗಿದೆ. ಇದಕ್ಕಾಗಿ ವೆಚ್ಚ ಮಾಡಿರುವ ಹಣ ₹7,18,86,500/– (ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಆ) ಬೀದರ್ ಜಿಲ್ಲೆಯ ವಿವಿಧ ಮತ ಕ್ಷೇತ್ರಗಳ 2393 ಅಭ್ಯರ್ಥಿಗಳು ಉಡುಪು ತಯಾರಿಕೆ ಇಲೆಕ್ಟ್ರಿಕಲ್, ರೀಟೈಲ್ ಹಾಸ್ಪಿಟಾಲಿಟಿ, ಕಟ್ಟಡ ನಿರ್ಮಾಣ, ಜೀವನ ಕಲೆ, ವೃತ್ತಿಗಳಲ್ಲಿ ತರಬೇತಿ ಪಡೆಯುವ ಮೂಲಕ ಈ ಯೋಜನೆಯ ಲಾಭವನ್ನು ಪಡೆದುಕೊಂಡಿದ್ದಾರೆ.